**(ಇಂದು ದಿನಾಂಕ 19.06.2026 ರಂದು ಸಾಕ್ಷಿ ಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲು:- ಎದುರುದಾರರ ಪರ ವಕೀಲರಿಂದ:-**

ನನ್ನ ಹೆಂಡತಿ ಶಾಮಲಾ ಅವರು ಹುಡಿದ್ದ ಪ್ರಕರಣದಲ್ಲಿ ಜೈಲಿಗೆ ಹೋಗಿದ್ದು ನಾನು ಅವರನ್ನು ಬಿಡಿಸಿಕೊಂಡು ಬಂದಿರುತ್ತೇನೆ. ಈಗ ನನಗೆ ಈ ಅರ್ಜಿಯಲ್ಲಿರುವ ವಕೀಲರು ಶಾಮಲಾಗೆ ಪ್ರಕರಣದಲ್ಲಿ ಹಾಜರಾಗುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನು ತ್ತಾರೆ. ನನ್ನ ಜಮೀನಿನಲ್ಲಿ ಏನೆನು ಬೆಳೆಯುತ್ತಿತ್ತು ಎಂದರೆ ನನಗೆ ಗೊತ್ತು. ನನ್ನ ಜಮೀನಿನಲ್ಲಿ ನಾನು ಇಲ್ಲದಿರುವಾಗ ಗಾಂಜಾ ನನ್ನ ಹೆಂಡತಿ ಬೆಳೆಯುತ್ತಿದ್ದರು. ನಾನು ರಿಹ್ಯಾ ಬಿಲಿಟೇಶನ್‌ನಿಂದ ಬಂದ ನಂತರ ನನಗೆ ಆ ವಿಷಯ ತಿಳಿಯಿತು. ಅವರು ಎಷ್ಟು ಗಾಂಜಾ ಬೆಳೆದಿದ್ದರು ಎಂದು ನಿಖರವಾಗಿ ಹೇಳಲಾಗುವುದಿಲ್ಲ.ಮೊದಲನೇ ಹೆಂಡತಿ ನನ್ನನ್ನು ರಿಹ್ಯಾ ಬಿಲಿಟೇಶನ್ ಸೆಂಟರ್ ಸೇರಿಸಿದ್ದರು ಎಂದರೆ ಸರಿಯಲ್ಲ. ನನ್ನ ಮೊದಲ ಹೆಂಡತಿಯ ಹಾಗೂ ನನ್ನ ನಡುವೆ ಒಂದು ದಾವೆ ಇತ್ತು, ಅದರ ಸಂಖ್ಯೆ ಗೊತ್ತಿಲ್ಲ. ಯಾವ ನ್ಯಾ ಯಾಲಯದಲ್ಲಿ ನಡೆಯುತ್ತಿತ್ತು ಗೊತ್ತಿಲ್ಲ. ದಾವೆ ಬಗ್ಗೆ ಗೊತ್ತಿದ್ದರು ಹಾಗೂ ಚಾಲತಿಯಲ್ಲಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರರು ನಮ್ಮ ಮನೆಯಲ್ಲಿ ವಾಸವಿರಲಿಲ್ಲ. ಅವರು ನಮ್ಮ ಮನೆಯ ಬಳಿ ಬಂದು ಹೋಗುತ್ತಿರಲಿಲ್ಲ. ನನ್ನ ಆರೋಗ್ಯ ಕ್ಷೀಣಿಸಿದ ಕಾರಣ ನನ್ನ ಹೆಂಡತಿ ನನಗೆ ವಿಷ ಹಾಕಿದಳು ಎಂದು ಹೇಳುತ್ತಿದ್ದೇನೆ. ಆಸ್ಪತ್ರೆಯಲ್ಲಿ ನಾನು ಪರೀಕ್ಷೆ ಮಾಡಿಸಿರುತ್ತೇನೆ ಆದರೆ ಅದರ ವಿವರ ನನಗೆ ನೆನಪಿಲ್ಲ. ನನಗೆ ಆನೇಕಲ್ ಸರ್ಕಾರ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿರುತ್ತಾರೆ. ನನಗೆ ಈಗ ತೋರಿಸುತ್ತಿರುವ ಸಂದೇಶದ ಬಗ್ಗೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆ ನನ್ನ ಹೆಂಡತಿ ಸಲ್ಲಿಸಿರುವುದೋ ಅಲ್ಲವೋ ನನಗೆ ಗೊತ್ತಿಲ್ಲ. ಎಮ್.ಸಿ ನಂ.6896/2025 ರಂತೆ ನನ್ನ ವಿರುದ್ಧ ನನ್ನ ಹೆಂಡತಿ ಕೌಟುಂಬಿಕ ನ್ಯಾ ಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಳೋ ಇಲ್ಲವೋ ಗೊತ್ತಿಲ್ಲ. ನನ್ನ ಜಮೀನಿಗೆ ಸಿ.ಸಿ ಕ್ಯಾ ಮರಾ ಹಾಕಿದ್ದೆ ಆದರೆ ಅದನ್ನು ಕಿತ್ತು ಹಾಕಿದ್ದರು. ನನ್ನ ಹೆಂಡತಿ ಯಾವುದೇ ಗಾಂಜಾ ಬೆಳದಿರಲಿಲ್ಲ ಹಾಗೂ ಮಾರಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ತುಂಬಾ ಮದ್ಯಪಾನ ಮಾಡುತ್ತಿದ್ದರಿಂದ ನನ್ನ ಹೆಂಡತಿ ನನ್ನನ್ನು ರಿಹ್ಯಾ ಬಿಲಿಟೇಶನ್‌ಗೆ ಸೇರಿಸಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

**(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಿ ಕೇಳಿ ಸರಿ ಇದೆ.**

**2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,**
**ಆನೇಕಲ್.**